JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕಥನಗಳಲ್ಲಿ ಬ್ರಿಟೀಶ್ ಪ್ರಭುತ್ವದ ರೂಪಗಳು ಮತ್ತು ರಾಷ್ಟ್ರೀಯತೆಯ ಸ್ವರೂಪ

**ಡಾ. ಮೋಹನ್ ಎ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹೊಸದುರ್ಗ–577527

ಮಿರ್ಜಿ ಅಣ್ಣಾರಾಯರ ನಿಸರ್ಗ ಕಾದಂಬರಿಗೆ ಕನ್ನಡ ಕಥನಸಾಹಿತ್ಯದಲ್ಲಿ ವಿಶೇಷವಾದ ಸ್ಥಾನವಿದೆ. ಗ್ರಾಮೀಣ ಬದುಕನ್ನು ಅದು ಇರುವ ಸ್ಥಿತಿಯಲ್ಲೇ ಸಹಜವಾಗಿ ಕಟ್ಟಿಕೊಡುತ್ತದೆ. ಇದು ದೇಶಿ ಸಂಸ್ಕೃತಿಯನ್ನು ಚಿತ್ರಿಸುವ ಕಾದಂಬರಿಯಾಗಿದ್ದು ಜನಸಾಮಾನ್ಯರ ಜೀವನದ ವಾಸ್ತವದ ಚಿತ್ರಣವನ್ನು ಅನಾವರಣಗೊಳಿಸುತ್ತದೆ. ಈ ಕಾದಂಬರಿಯಲ್ಲಿ ಸಾಂಸ್ಕೃತಿಕ ಪಲ್ಲಟದ ಪ್ರತೀಕವಾಗಿ ವಸಾಹತುಶಾಹಿ ಮೂಲಕ ಬಂದ ಆಧುನಿಕತೆ ಆಧುನಿಕ ಶಿಕ್ಷಣ ಜನಸಾಮಾನ್ಯರ ಜೀವನದ ಮೇಲೆ ಬೀರಿದ ಪರಿಣಾಮವಾಗಿ ಗುರುತಿಸುತ್ತಾ ಸಾಂಸ್ಕೃತಿಕ ಪಲ್ಲಟದ ಸ್ವರೂಪವನ್ನು ಮುಂದಿನಂತೆ ವಿಶ್ಲೇಷಿಸಲಾಗಿದೆ.

"ವಸಾಹತು ಪೂರ್ವದ ಸಂದರ್ಭದಲ್ಲಿ ಇದ್ದ ಐಗಳ ಮಠವೆಂಬುದು ಮೇಲುಜಾತಿಯವರಿಗೆ ಕಲಿಸಲು ಇದ್ದ ತಾಣಗಳು. ಈ ತಾಣಗಳಲ್ಲಿ ಸಂಸ್ಕೃತ ಮಾತ್ರವೇ ಮುಖ್ಯವಾಗಿತ್ತು. ಇಂಗ್ಲಿಷು ಸಂಸ್ಕೃತಿಯು ಈ ಪರಿಕಲ್ಪನೆ ಬದಲಾಯಿಸಿತು"[1] ಹೀಗೆ ವಸಾಹತುಶಾಹಿ ಮೂಲಕ ಬಂದ ಆಧುನಿಕ ಶಿಕ್ಷಣ ನಿಸರ್ಗ ಕಾದಂಬರಿಯಲ್ಲಿ ಕೌಟುಂಬಿಕ ಬದಲಾವಣೆಗೆ ಮನುಷ್ಯ ಚಿಂತನೆಗೆ ಕ್ರಮಕ್ಕೆ ಕಾರಣವಾಗಿರುವುದನ್ನು ಗುರುತಿಸಬಹುದು.

ಭಾರತವನ್ನು ಪ್ರವೇಶಿಸಿದ ಆಧುನೀಕತ ಪಾಶ್ಚಾತ್ಯ ಶಿಕ್ಷಣ, ಭಾರತೀಯ ಸಮಾಜದಲ್ಲಿದ್ದ ಸಂಪ್ರದಾಯ ಮೂಢನಂಬಿಕೆ ಅಂಧಾನುಕರಣೆ ಲಿಂಗ ರಾಜಕಾರಣ ಮುಂತಾದವುಗಳಲ್ಲಿ ಬದಲಾವಣೆ ತರಲು ಪ್ರಯತ್ನಿಸಿದವು. ನಗರ–ಹಳ್ಳಿಗಳ ಸಂಪರ್ಕದಿಂದ ಸಮಾಜದಲ್ಲಿದ್ದ ಸಂಪ್ರದಾಯ ಆಚರಣೆಯಲ್ಲಿ ಸ್ವಲ್ಪಮಟ್ಟಿನ ಸಡಿಲಿಕೆ ಉಂಟಾಗಿತ್ತು. ಹೀಗೆ ಆಧುನೀಕತೆ ಆಧುನಿಕ ಶಿಕ್ಷಣ ನಿಸರ್ಗ ಕಾದಂಬರಿಯಲ್ಲಿ ಅನಂತ ಮತ್ತು ತಾರಾರ ಬದುಕಿನ ಮೂಲಕ ಸಾಮಾಜಿಕ ಬದಲಾವಣೆಯನ್ನು ತರಲು ಪ್ರಯತ್ನಿಸಿದ್ದನ್ನು ಗುರುತಿಸಬಹುದು.

"ನಿಸರ್ಗ ಕಾದಂಬರಿಯಲ್ಲಿ ಕೆಳ ಮಧ್ಯಮವರ್ಗದವರ ಬದುಕು ಯಥಾವತ್ತಾಗಿ ಚಿತ್ರಿತವಾಗಿದೆ. ಇಲ್ಲಿ ಬರುವ ಚಿಮ್ಮವ್ವ, ರತ್ನವ್ವ, ಅಮ್ಮವ್ವ, ಹೂವಣ್ಣ, ಮಲ್ಲಪ್ಪ, ತಾರಕ್ಕ ಇತ್ಯಾದಿಯವರು ಒಂದು ವರ್ಗದ ಮನೋಸ್ಥಿತಿಯವರಂತೆ ಕಂಡುಬಂದರೆ ಹೊಸಮನಿಯವರ ಜಗತ್ತು ಸ್ವಲ್ಪ ಬೇರೆ ರೀತಿಯದು ಸುಂದರವ್ವ ರಾಮಣ್ಣ ಹಾಗೂ ಅವರ ಮಕ್ಕಳಾದ

ಅನಂತ ನಾಭಿರಾಜರು ಹೊಸಪೇಟೆ ಸಮಾಜದ ಮಾದರಿಗಳು ಇಲ್ಲಿ ಕಂಡುಬರುವ ತಾರಕ್ಕ – ಅನಂತರ ನಡುವಿನ ಆಕರ್ಷಣೆ ಪ್ರಮುಖವಾಗಿ ಅನಕ್ಷರಸ್ಥ ಹಳ್ಳಿಯ ಹುಡುಗಿ ಅಕ್ಷರಸ್ಥ ನಗರದ ಹುಡುಗನ ಸಂಬಂಧದಲ್ಲಿ".[2] ಈ ಕಾದಂಬರಿಯಲ್ಲಿ ಅನಂತ ತಾರೆಯರು ಬೆಳೆದು ಬಂದ ಪರಿಸರದ ಪರಿಣಾಮವಾಗಿ ಅವರಲ್ಲಿ ಪ್ರೇಮಾಂಕುರವಾದದ್ದು ನಿಸರ್ಗ ಸಹಜ. ಇವರ ಪ್ರೀತಿ ಬಾಲ್ಯದಿಂದಲೇ ಮೂಡಿಬಂದದ್ದು. ಮಧ್ಯಾಹ್ನ ಊಟಕ್ಕೆ ಮನೆಗೆ ಬಂದಾಗ ಸುಂದರಬಾಯಿ ಅನಂತವನ್ನು ಬೈಯ್ದು ಓದಲು ಹಚ್ಚುತ್ತಾಳೆ. ಅನಂತ ಒಂದು ಮೂಲೆಯ ಮರೆಯಲ್ಲಿ ಕುಳಿತು ಗುಸು ಗುಸು ಓದುತ್ತಿರುತ್ತಾನೆ. ತಾರಕ್ಕ ಅವನನ್ನು ಪತ್ತೆ ಹಚ್ಚಿ ಮಾತನಾಡಿಸುತ್ತಾಳೆ.

"ಅನಂತಾ! ಎಂದಳು ಹರುಷದಿಂದ
ಅನಂತ ನಸುನಗೆಯಿಂದ ತಾರಕ್ಕನ ಕಡೆನೋಡಿ ಯಾಕ ಎಂದ
ಆಡಲಾಕ ಹೋಗೋಣು ಬಾ ಬಾ
ಒಲ್ಲಿ ಅವ್ವ ಬಯ್ಯತಾಳು
ನೀ ಆಕೀ ಮುಂದ ಹಾಂಗ್ಯಾಕ ಮಾಡಲೆ? ತಿನಾಕೆ ಕೊಟ್ಟರ ಹೊರಗೆ
ತಗೊಂಡು ಬಂದಿ ಅದಕೆ ಬೈದಳು
ನೀ ಆಡಕ ಕರಕೋಲಿಲ್ಲಾ... ತಿನ್ಲಾಕ ತಂದರ ಕರಕೊಂಡಿ ಅಂತ
ತಂದಿನು ಅನಂತ ನಿಟ್ಟುಸಿರೊಂದನ್ನು ಬಿಟ್ಟು ಹೇಳಿದ.

ತಾರಕ್ಕನ ಕಣ್ಣುಗಳಲ್ಲಿ ನೀರು ತುಂಬಿದವು ಪ್ರೀತಿಯಿಂದ ಅನಂತನ ಕೈ ಹಿಡಿದು ಇನ್ನೊಂದು ನಿನ್ನ ಬಿಟ್ಟು ಆಡೋದಿಲ್ಲ ಆ್ಣ? ಎಂದಳು ಅನಂತ ಗೋಣುಹಾಕಿದ"[3] ಈ ಸಂಭಾಷಣೆಯ ಧ್ವನಿಯಲ್ಲಿ ಇಬ್ಬರು ಕೂಡಿ ಆಡುವುದಕ್ಕೆ ನಡೆಸುವ ಉಪಾಯ ಹುಡುಕಾಟ ಇಬ್ಬರು ಕೂಡಿ ಆಡುವುದಕ್ಕೆ ನಡೆಸುವ ಉಪಾಯ ಹುಡುಕಾಟ ಎಂದೂ ಬಿಟ್ಟು ಆಡುವುದಿಲ್ಲ ಎನ್ನುವಲ್ಲಿ ಅವರಿಬ್ಬರ ಸಂಬಂಧದ ಗಾಢತೆಯು ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ ಅನಂತ ತಾರಾ ಅವರ ಅನೋನ್ಯ ಪ್ರೀತಿ ನಿಸರ್ಗಸಿದ್ದ ಆದರೆ ನಿಯಮವಿರುದ್ಧ ನಿಸರ್ಗ ಶಕ್ತಿಗೆ ಶರಣ ಹೋದ ಅವರು ತಮ್ಮ ಅನೋನ್ಯ ಪ್ರೇಮವನ್ನು ತಾರೆಯ ವಿವಾಹ ನಂತರವೂ ಉಳಿಸಿಕೊಳ್ಳುವುದು ಆಧುನಿಕತೆಯ ಪ್ರತೀಕದಂತೆ ಕಂಡುಬಂದರೂ ತನ್ನ ಶಾಲಾವಿದ್ಯಾಭ್ಯಾಸದಲ್ಲಿ ಅನಂತ ಜಾಣನಾಗಿದ್ದ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸದೇ ಇತ್ತ ಆಧುನಿಕ ಶಿಕ್ಷಣ ಪಡೆದ ಅನಂತ ತಾರಾಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ವಿಫಲನಾಗುವುದನ್ನು ಗುರುತಿಸಬಹುದು.

ವಿಚಾರಪರತೆ ಆಧುನಿಕತೆಗಳ ಪ್ರತೀಕವಾದ ಅನಂತ ಈ ಸಮಾಜದ ಕಟ್ಟು ಕಟ್ಟಳೆಗಳ ಹಿಂದಿರುವ ಅವೈಚಾರಿಕತೆಯ ಬಗ್ಗೆ ಚಿಂತಿಸುವವನಾದರೂ ಏನೂ ಮಾಡಲಾರದವನು ಕಾದಂಬರಿಯ ಕೇಂದ್ರ ವ್ಯಕ್ತಿಗಳಾದ ತಾರಾ ಅನಂತರಿಗೆ

ಬಾಲ್ಯದಲ್ಲಿಯೇ ಬೇರೆ ಬೇರೆಯವರೊಂದಿಗೆ ವಿವಾಹವಾಗಿದೆ. ತಾರಕ್ಕನ ಅತ್ತೆ ಚಿಮ್ಮವ್ವನ ಆಸ್ತಿಯ ಆಸೆಗೆ ಬಲಿಯಾಗುವ ತಾರಾ ಅಲ್ಲಿಂದ ನಿರ್ಗಮಿಸಬೇಕಾಗುವಲ್ಲಿ ಅತ್ತೆಯ ಹಣದ ಆಸ್ತಿಯ ವ್ಯಾಮೋಹ ಮಾವನ ದೌರ್ಬಲ್ಯ ಗಂಡನ ಪುಕ್ಕಲುತನ ಅವಳ ಬದುಕನ್ನು ಬದುಕಿನ ಸಹಜತೆಯನ್ನು ಘಾಸಿಗೊಳಿಸುತ್ತದೆ ಅತ್ತೆಯ ಸರ್ವಾಧಿಕಾರದ ಧೋರಣೆಯಲ್ಲಿ ನಲುಗಿದ ಜೀವ ಸಹಜವಾಗಿಯೇ ತನ್ನನ್ನು ಪ್ರೀತಿಸುವವರನ್ನು ಹುಡುಕುವಂತೆ ಇಲ್ಲಿ ತಾರ ಅನಂತನ ಪ್ರೀತಿಗಾಗಿ ಹಂಬಲಿಸುತ್ತಾಳೆ. ಆದರೆ ಅನಂತ ಆಧುನೀಕತೆಯ ಪ್ರತೀಕ ಶಿಕ್ಷಣ ಪಡೆದಿದ್ದರೂ ತಾರಾಳನ್ನು ಮದುವೆ ಆಗುವಲ್ಲಿ ವಿಫಲನಾಗುವುದು ಗುರುತಿಸಬಹುದು.

ನಿಸರ್ಗ ಕಾದಂಬರಿಯಲ್ಲಿ ಅನಂತ ನಗರ ಹಳ್ಳಿಯ ಕೊಂಡಿಯಂತೆ ಕಂಡುಬರುವವ ಇವೆರಡರ ಒಡನಾಡಿಯಾದ ಆತ ಆಧುನಿಕತೆಯ ರೂವಾರಿಯಾಗಿದ್ದಾನೆ. ಆತನ ಮನಸ್ಸು ವಾಸ್ತವವಾಗಿ ತಾರಾನ ಪ್ರೀತಿಯನ್ನು ಬಯಸಿದರೂ ಬಾಲ್ಯದಲಿನ ಸಂಪ್ರದಾಯಸ್ಥ ನಂಬಿಕೆಯ ಮದುವೆ ಆತನ ಕನಸು ಪೂರ್ಣವಾಗಲು ಬಿಡುತ್ತಿಲ್ಲ. ಬಾಲ್ಯದ ಮಡದಿಯನ್ನು ವಂಚಿಸಿ ಹೊರಬರಲಾಗದ ಸ್ಥಿತಿ ಅವನದು ಆದರೆ ತಾರ ಈಗಾಗಲೇ ಸಾಂಪ್ರದಾಯಿಕ ಮದುವೆಯಲ್ಲಿ ಬದುಕಿ ಅರ್ಥತೆಯನ್ನು ಕಳೆದುಕೊಂಡು ಯಾವ ಸುಖ ಪಡೆಯದೆ ಇದ್ದುದರಿಂದ ತನ್ನ ಬದುಕು ಸುಖಾಂತ್ಯವಾಗಬೇಕಾದರೆ ಸಂಪ್ರದಾಯಗಳ ಆಚೆ ಇರುವ ವಾಸ್ತವ ಬದುಕನ್ನು ಹುಡುಕಿ ಹೊರಟಾಗಲೇ ಸಾಧ್ಯ ಎಂದು ಅರಿತಿದ್ದಳು. ಆದ್ದರಿಂದ ಆಕೆ ಅನಂತ ತನ್ನನ್ನು ಎರಡನೇಯ ಹೆಂಡತಿಯಾಗಿಯಾದರೂ ಸ್ವೀಕರಿಸಲಿ ಎಂದು ಹಂಬಲಿಸುತ್ತಾಳೆ. ಆದರೆ ಆಧುನಿಕತೆಗೆ ಒಗ್ಗಿಕೊಂಡಿದ್ದ ಅನಂತನಿಗೆ ಇದು ಸಾಧ್ಯವಾಗದಿರುವುದು ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ ಆಧುನಿಕತೆ ಮತ್ತು ಸಂಪ್ರದಾಯಗಳ ನಡುವೆ ಸಿಲುಕಿರುವ ಅನಂತರ ನಿರ್ಣಯ ಅನಿಶ್ಚಿತತೆಯಿಂದ ಕೂಡಿದೆ ಬಾಲ್ಯವಿವಾಹ ಸಂಪ್ರದಾಯವಾದರೆ ತಾರಾಳ ಪ್ರೀತಿ ಆಧುನಿಕತೆಯ ಆಯ್ಕೆಯ ಸ್ವತಂತ್ರ ಬದುಕಾಗುತ್ತದೆ. ಅನಂತನಿಗೆ ಸಂಪ್ರದಾಯದಲ್ಲಿ ನೈತಿಕತೆ ಮಾನವೀಯ ಮೌಲ್ಯಗಳ ಈ ಪ್ರಶ್ನೆ ಕಾಡುವುದರಿಂದ ಬಾಲ್ಯದಲ್ಲಿ ಮದುವೆಯಾದ ಮಡದಿಯನ್ನು ಯಾವ ತಪ್ಪು ಇಲ್ಲದ ಅವಳನ್ನು ಬಿಡಲಾರದೆ ಬಾಹ್ಯನೋಟಕ್ಕೆ ಒಪ್ಪಿಕೊಂಡು ಬದುಕಲು ಸಿದ್ದನಾಗುವಲ್ಲಿ ಸಂಪ್ರದಾಯದ ಬಿಗಿಯಿದೆ. ಆದರೆ ಆ ಬದುಕಿಗೆ ಆದ್ಯತೆಯಾಗಲಿ ಅಸ್ತಿತ್ವವಾಗಲಿ ಇಲ್ಲಿ ಅದು ಸಾಧ್ಯವಾಗುತ್ತಿದ್ದರು ತಾರಾಳ ಜೊತೆಗೆ ಮಾತ್ರ ಆ ಸತ್ಯ ಅನಂತನಿಗೆ ಮಾತ್ರ ಗೊತ್ತು. ಈ ಕಾರಣಕ್ಕೆ ಆತ ತನ್ನ ಬದುಕನ್ನು ತಾನ ರೂಢಿಸಿಕೊಳ್ಳಲು ಸಾಧ್ಯವಾಗದೆ ತಾರಾಳ ಪ್ರೀತಿಯಿಂದ ದೂರವಾಗದೆ ಯಾಂತ್ರಿಕ ಬದುಕು ಸಾಗಿಸುವುದು ಆಧುನಿಕತೆಯ ಪ್ರಭಾವದಿಂದಲೇ ಎಂಬುದನ್ನು ಗುರುತಿಸಬಹುದು.

ಒಟ್ಟಾರೆ ಈ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ಪಡೆದ ಆಧುನಿಕತೆಗೆ ಒಳಗಾದ ಅನಂತ ತನ್ನ ಸಂಪ್ರದಾಯದ ಮದುವೆ ತೊರೆದು ತನ್ನ ಬಾಲ್ಯದಿಂದಿನ ಪ್ರೀತಿಯ ಸಾಕ್ಷಾತ್ಕಾರಕ್ಕೆ ಮುಂದಾಗಿದ್ದರೆ ಅನಂತ ತಾರೆಯರ ಬದುಕು ಸುಖಾಂತ್ಯವಾಗುತ್ತಿತ್ತು. ಹಾಗೆ ಮಾಡಿದ್ದರೆ ಯಾವ ತಪ್ಪು ಮಾಡದ ಅನಂತನ ಬಾಲ್ಯದ ಹೆಂಡತಿಗೆ ಮೋಸವಾಗುತ್ತಿತ್ತು. ಆದರೆ ಸಂಪ್ರದಾಯ ಆಧುನಿಕತೆಯ ವಾಸ್ತವ ಬದುಕಿನ ಸಂಘರ್ಷದಲ್ಲಿ ಸಿಲುಕಿ ನಲುಗಿ ಹೋಗುತ್ತಿರುವರು ಮಾತ್ರ ಬದುಕಿನ ಸಾರ್ಥಕತೆ ಇಲ್ಲದೆ ಕೃತಕ ಬದುಕು ಸಾಗಿಸಬೇಕಾಗುತ್ತದೆ ಎಂಬುದನ್ನು ಅನಂತನ ಪಾತ್ರದ ಮೂಲಕ ಗುರುತಿಸಬಹುದು.

ನಿಸರ್ಗ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣದ ಮೇಲೆ ಹಳ್ಳಿಗರಿಗೆ ಇರುವ ಒಲವು. ಅದು ಅವರನ್ನು ಪ್ರಭಾವಿಸಿದ ಬಗೆ. ಹಳ್ಳಿಯ ಜನರಿಗೆ ಆಧುನಿಕ ಶಿಕ್ಷಣ ಎಷ್ಟು ಕೂತುಹಲದ ವಿಷಯವಾಗಿದ್ದಿತು. ಅದು ಹೇಗೆ ತನ್ನ ಪ್ರಭಾವ ಹಳ್ಳಿಯ

ಕಡೆ ಬೀರಿತು ಎಂಬುದನ್ನು ಗುರುತಿಸುವುದಾದರೆ ನಿಸರ್ಗ ಸಹಜವಾದ ತಾರಾ ಅನಂತರ ಪ್ರೀತಿಯೂ ಶಿಕ್ಷಣದಿಂದ ಆದ ಆಕರ್ಷಣೆಯೇ ಆಗಿದೆ. "ತಾರಕ್ಕ ಅನಂತರ ನಡುವಿನ ಆಕರ್ಷಣೆ ಪ್ರಮುಖವಾಗಿ ಅನಕ್ಷರಸ್ಥ ಹಳ್ಳಿಯ ಹುಡುಗಿ ಅಕ್ಷರಸ್ಥ ನಗರದ ಹುಡುಗನ ಸಂಬಂಧದಲ್ಲಿ"[4]

ಇಲ್ಲಿ ಅನಂತನ ಬಾಲ್ಯದ ಓದು ಚುರುಕುತನ ಸಹಜವಾಗಿಯೇ ತಾರಕ್ಕನಲ್ಲಿ ಅವನ ಕುರಿತಾಗಿ ಒಲವು ಮೂಡಿಸುತ್ತದೆ.

ನಿಸರ್ಗ ಕಾದಂಬರಿಯಲ್ಲಿ ನಗರ ಪರಿಸರದಲ್ಲಿ ಬೆಳೆದು ಆಧುನಿಕ ಶಿಕ್ಷಣ ಕಲಿತ ಅನಂತ ಹಳ್ಳಿಯ ಹುಡುಗರ ಮೇಲೆ ಪ್ರಭಾವ ಬೀರುವುದನ್ನು ಹೀಗೆ ವಿವರಿಸಿದ್ದಾರೆ. "ಅನಂತ ತಮ್ಮ ಸಾಲೆಯಲ್ಲಿ ಮಾಸ್ತರರು ಕಲಿಸಿದ ಒಂದೊಂದೇ ಕತೆ ಹೇಳಹತ್ತಿದ ಅವನು ಕತೆ ಹೇಳಲು ಬಹಳ ಜಾಣ ಒಬ್ಬೊಬ್ಬರೇ ಅನಂತನ ಕಡೆಗೆ ಬರಹತ್ತಿದರು ಕಥೆ ಕೇಳಲೆಂದು".[5]

ಈ ಕಾದಂಬರಿಯಲ್ಲಿ ತಾರಕ್ಕನ ಮದುವೆಗೆ ಬಗ್ಗೆ ಅನಂತ ತನ್ನೂರಿನ ಶಾಲೆಯಲ್ಲಿ ಕಲಿಸಿದ ಪುಸ್ತಕ ಮರೆತು ಆಟದಲ್ಲಿ ನಿರಂತರ ತೊಡಗಿದಾಗ ಅನಂತನ ತಾಯಿ ಸಿಟ್ಟುಗೊಂಡು "ಬರೋಗ ಮನ್ಯಾಗ ಅವರಿಗೆ ಓದತ್ಯಾನಂತ ಹೇಳಿ ಪುಸ್ತಕ ತಗೊಂಡು ಒಂದ್ಯಾನ ಇಲ್ಲಿ ಬಂದ ಮ್ಯಾಲಿ ಒಂದಿನಾದ ಪುಸ್ತಕ ಕೈಯಾಗ ಹಿಡಿಬೇಕು ಈ ಸಾರೆ ನಾಪಾಸರ ಆಗಲ್ಲಾ ಸಾಲೀ ಬಿಡಸಿ ದನಾ ಕಾಯ್ಕ ಹಚ್ಚತ್ಯಾನು ಪರಬ್ಯಾನ ಬದಲು"[6] ಎನ್ನುವುದು ತಕ್ಷಣ ಅನಂತ ಪುಸ್ತಕ ಹಿಡಿದು ಕೂರುವುದು ಆಧುನಿಕ ಶಿಕ್ಷಣದ ಮೇಲೆ ಹಳ್ಳೀಗರಿಗೆ ಇರುವ ಒಲವು. ಅದು ಅವರನ್ನು ಪ್ರಭಾವಿಸಿದ ಬಗೆ ತಿಳಿಸುತ್ತದೆ ಇಲ್ಲಿ ಅನಂತನಿಗೆ ದನಾ ಕಾಯುವ ಹುಡುಗನಂತೆ ಹರಕು ಅಂಗಿ ಹೊಲಸು ಮೈ ಬೇಡವಾಗಿ ಶಿಕ್ಷಣದ ಕಡೆ ಒಲವು ತೋರಿಸುವುದು ಗುರುತಿಸಬಹುದು.

1. "ಅಂತೂನ ಸಾಲಿ ಭಾಳಾ ದಿನ ತಪ್ಪತೈತಿ ಅಂತ ಅದಕ ಹೋಗತ್ಯಾನ ಅಂತಾಳು. ನಮ್ಮ ಅಂತೂಗ ಸಾಲಿ ಮ್ಯಾಲ ಭಾಳ ಧ್ಯಾನ ಇನ್ನ ನಮ್ಮ ಅನಂತ ಭಾಳಾ ಕಲ್ಯಾಂವ ಇದಾನ ಮಾಮಲೇದಾರ ಆಗ್ತಾನ ಅಂತ"[7]

ಈ ಸಂಭಾಷಣೆಗಳು ಹಳ್ಳಿಗರಿಗೆ ಪಟ್ಟಣದ ಆಧುನಿಕ ಶಿಕ್ಷಣದ ಮೇಲಿರುವ ಒಲವು ಆಧುನಿಕ ಶಿಕ್ಷಣ ಅನಂತನ ಕುಟುಂಬದ ಮೇಲೆ ಯಾವ ಪರಿಣಾಮ ಬೀರಿತ್ತು ಎಂಬುದನ್ನು ತಿಳಿಸುತ್ತದೆ. ಇಲ್ಲಿ ಅನಂತನ ತಾಯಿ ಸುಂದರಬಾಯಿ ಮಗನಿಗೆ ಶಾಲೆ ತಪ್ಪಬಹುದು ಎಂದು ಅನಕ್ಷರಸ್ಥಳಾಗಿದ್ದರೂ ಎಚ್ಚರವಹಿಸುವುದನ್ನು ಮಾಮಲೇದಾರ ಹುದ್ದೆ ಎಂದರೇನು? ಅರಿಯದ ಅನಕ್ಷರಸ್ಥ ತಾರಾ, ಅನಂತನ ವಿದ್ಯಾಭ್ಯಾಸದ ಕುರಿತು ಹೆಮ್ಮೆಯ ಮಾತುಗಳಾನ್ನುಡುವುದು ಆಧುನಿಕ ಶಿಕ್ಷಣದ ಪ್ರಭಾವವೇ ಆಗಿದೆ ಎಂಬುದನ್ನು ಗುರುತಿಸಬಹುದು.

ಆಧುನಿಕ ಶಿಕ್ಷಣ ಅನಕ್ಷರಸ್ಥರಲ್ಲೂ ಓದುವ ಹಂಬಲ ಮೂಡಿಸದುದನ್ನು ನಿಸರ್ಗ ಕಾದಂಬರಿಯಲ್ಲ ನೋಡುವುದಾದರೆ "ಅನಂತ ತಾರಕ್ಕನಿಗೆ ತನ್ನ ಪುಸ್ತಕ ಓದಿ ತೋರಿಸುವವ ಅದರಲ್ಲಿಯೆ ಕವಿತೆ ಅಂದು ತೋರಿಸುವ ಆಗ 'ಅಂತಾ ಇಂಥಾ ಸಣ್ಣ ಅಕ್ಷರ ಹ್ಯಾಂಗ ಓದತಿಯೋ' ಅದಕ್ಕೆ ಅನಂತ ಇವ ಸಣ್ಣು ಯಾನ ಆರನೇ ಯೋಳನೇ ಎತ್ತೇವ ಪುಸ್ತಕದಾಗ ಭಾಳ ಸಣ್ಣು ಅಕ್ಷರ ಇರತಾವ ಅವ ನೋಡಿದರ ನೀ ಯಾನ ಅಂದೀ"[8] ಅದರಿಂದ ಅವಳು ಸಾಲೆ ಕಲಿಯುವುದು ಕಠಣ ಎಂದು

ಸುಮ್ಮನಾಗುವಳು ಸಂಜೆ ಅನಂತನ ಓದುವಿಕೆಯ ನಲ್ಗತೆ ತಂದೆ ಮಲ್ಲನಿಗೆ ಹೇಳುವಳು ಈ ಎಲ್ಲಾ ಸಂಭಾಷಣೆಗಳು ಚಂದೂರಿನಲ್ಲಿ ಜೀವಿಸಿದ್ದ ತಾರಕ್ಕ ಮತ್ತು ಅವಳ ಕುಟುಂಬಕ್ಕೆ ಆಧುನಿಕ ಶಿಕ್ಷಣದ ಬಗೆಗಿರುವ ಒಲವನ್ನು ತಿಳಿಸುತ್ತವೆ.

ಈ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ಅನಂತನ ವೇಷಭೂಷಣದಲ್ಲಿ ಮಾರ್ಪಾಡು ಮಾಡಿದ್ದನ್ನೂ ಗುರುತಿಸುವುದಾದರೆ "ಅನಂತ ಈಗ ಹಾಯಸ್ಕೂಲಿನಲ್ಲಿ ಕಲಿಯುತ್ತಿದ್ದಾನೆ. ಈಗ ಆತ ತೆಳುವಾಧ ನಯವಾದ ಧೋತರ ಉಡುವನು ಮೇಲೆ ಶುಭ್ರವಾದ ಶರಟು ತೊಟ್ಟುಕೊಳ್ಳುವನು ತಲೆಗೂದಲುಗಳನ್ನು ಚೆನ್ನಾಗಿ ಬಾಚಿಕೊಂಡು ಬೈತಲೆ ತೆಗೆದುಕೊಳ್ಳುವನು ಕೊರಳೊಳಗೊಂದು ಬಂಗಾರದ ಚಿಕ್ಕ ಲಾಕೆಟ್ಟು ಒಟ್ಟಿನ ಮೇಲೆ ಹೊಸ ಕಾಲದ ತರುಣನೆಂದೆ ಹೆಚ್ಚಿಗೆ ಹೇಳಲಿಕ್ಕೆ ಬೇಡ"[9] ಇಲ್ಲಿ ಆಧುನಿಕ ಶಿಕ್ಷಣದ ಪ್ರಭಾವ ಅನಂತನನ್ನು ಆಧುನಿಕತೆಯೆಡೆಗೆ ಕೊಂಡೊಯ್ದು ಅವನ ವೇಷಭೂಷಣ ನಡತೆಯ ಮೇಲೆ ಪ್ರಭಾವಬೀರಿದ್ದು ಗುರುತಿಸಬಹುದು.

ನಿಸರ್ಗ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ವಿದ್ಯಾವಂತರಲ್ಲಿ ಜಾಗೃತಿ ಮೂಡಿಸಿದ ಬಗೆಯನ್ನು ಗುರತಿಸುವುದಾದರೆ ವಿದ್ಯಾಭ್ಯಾಸ ಪಡೆದ ಅನಂತಾ "ಊರಾಗ ಈಗ್ಯಾಕ ಜಾತ್ರೆ ದನಾ ಸತ್ತರಾ ಲಗಾಮವ್ವ ಜಾತ್ರೆ ಯಾಕ ದನಗಳ ರೋಗಕ್ಕೆ ಲಗವ್ವ ಯಾನ ಮಾಡ್ತಾಳು ಹುಚ್ಚುಕಲ್ಪನೆ ಐತೀ ಈ ಹಳ್ಳಿ ಮಂದಿದ" ಎನ್ನುವ ಮಾತು ಆಧುನಿಕ ಶಿಕ್ಷಣ ಅವನಲ್ಲಿ ಮೂಡಿಸಿದ ಜಾಗೃತಿ ತಿಳಿಸುತ್ತದೆ. ಹಳ್ಳಿಯ ಮೂಢನಂಬಿಕೆ ಅಂಧಶ್ರದ್ಧೆ ಹೋಗಲಾಡಿಸುವಲ್ಲಿ ಅನಂತನ ಪಾತ್ರ ನೋಡುವುದಾದರೆ "ತಮ್ಮ ಮನಸ್ಸಿಗೆ ಬಂದಾಗ ಜಾತ್ರೆ ಮಾಡಕೋತ ಹೋದರೆ ಈ ಬ್ಯಾನಿ ಇರೋದ ಇವ ಮೂರು ನೂರ ರೂಪಾಯಿ ಔಷಧಕ್ಕ ಖರ್ಚು ಮಾಡಿದ್ದಿರ ಒಂದು ದನ ಸಾಯ್ತಿರಲಿಲ್ಲ"[10] ಎನ್ನುವನು. ಇದು ಆಧುನಿಕ ಶಿಕ್ಷಣ ಅನಂತನಲ್ಲಿ ಮೂಡಿಸಿದ ಜಾಗೃತಿಯ ಫಲವಾಗಿದ್ದನ್ನು ಗುರುತಿಸಬಹುದು.

ನಿಸರ್ಗ ಕಾದಂಬರಿಯಲ್ಲಿ ಅನಂತ ಅತ್ತೆಯ ಕಾಟದಿಂದ ಬಸವಳಿದು ಬಂದ ತಾರಕ್ಕನನ್ನು ಸಮಾಧಾನಪಡಿಸಲಿಕ್ಕೆ 'ಆನಂದಕಂದ'ರ "ಜಾಡರ ಜಾನಪ್ಪ" ಎಂಬ ಕತೆಯನ್ನು ಹೇಳುವನು ಅಲ್ಲದೇ ಮದುವೆಯಾಗಿ ವೈವಾಹಿಕ ಸುಖಪಡದ ತಾರಾ ತನ್ನತ್ತ ಸರಿದಾಗ ಅನಂತಾ "ನಾನು ಹೀಗೆ ಬಯಸುವುದು ಒಳಿತೇ ನಾನು ತಿಳಿದವ. ಕಲಿತವ ಶೀಲ, ಸಭ್ಯತೆಗಳ ಬಗ್ಗೆ ಮಾತಾಡುವೆ ಅವಳೊಂದು ಹಳ್ಳಿಯ ಹುಡುಗಿ ಏನೂ ಅರಿಯದವಳು ಅವಳು ಹಾಗೆ ನಡೆದರೆ ನಾನೇಕೆ ಅದಕ್ಕೆ ಪ್ರೋತ್ಸಾಹಿಸಿದೆ"[11] ಎಂದು ಯೋಚಿಸುವನು ಇದು ಆತನಲ್ಲಿ ಆಧುನಿಕ ಶಿಕ್ಷಣ ಮೂಡಿಸಿದ ಜಾಗೃತಿಯೇ ಆಗಿರುವುದು ಕಂಡುಬರುತ್ತದೆ.

ಒಟ್ಟಾರೆ ನಿಸರ್ಗ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ಐನಾಪುರದ ರಾಮಣ್ಣ ಮತ್ತು ಅನಂತನಲ್ಲಿ ಉಂಟು ಮಾಡಿದ ಜಾಗೃತಿ ಅವರ ಮೇಲೆ ಬೀರಿದ ಪ್ರಭಾವ ಚಂದೂರಿನ ಕೆಲಮಧ್ಯಮವರ್ಗದಲ್ಲಿ ವಾಸಿಸುತ್ತಿದ್ದ ತಾರಾಳ ಕುಟುಂಬದ ಮೇಲೆ ಬೆಳಕು ಚೆಲ್ಲಿ ಅವರು ಆಧುನಿಕ ಶಿಕ್ಷಣದಿಂದ ಆಕರ್ಷಿತರಾಗಿ ತಮ್ಮ ಮೂಢನಂಬಿಕೆಗಳ ಕುರಿತು ಎಚ್ಚರವಹಿಸಿರುವುದು ಗುರುತಿಸಬಹುದು. ಕ್ರಿಶ್ಚಿಯನ್ ಮಿಶನರಿಗಳು ಪ್ರಾರಂಭಿಸಿದ ಇಂಗ್ಲೀಷ್ ಭಾಷಾ ಶಿಕ್ಷಣವು ಇಬ್ಬಗೆಯ ಪರಿಣಾಮಬೀರಿತು: ಒಂದು ಪಶ್ಚಿಮದ ಸಾಂಸ್ಕೃತಿಕ ವಿಸ್ತರಣೆ ಯುರೋಪಿಯನ್ನರಿಗೂ ಭಾರತೀಯ ಪರಂಪರೆಯ ಅರಿವು ಇದು ಒಂದು ಕಡೆಗೆ

ಇದ್ದರೆ ಇನ್ನೊಂದು ಕಡೆಯಿಂದ ರಾಜಕೀಯ ಪುನರ್ ರೂಪೀಕರಣ ಸಾಧ್ಯವಾಯಿತು. ಹೊಸ ರೀತಿಯ ರಾಜಕೀಯ ಕಾಣಿಸಿಕೊಂಡವು. ಎರಡನೆದಾಗಿ ಬ್ರಿಟೀಶ್ ಮಾದರಿಯ ಕಲಿಕೆಯು ಮುಖ್ಯವಾಯಿತು.

**ಪರಾಮರ್ಶನ ಗ್ರಂಥಗಳು :**

1. ಕೆ. ಕೇಶವಶರ್ಮ, ವಸಾಹತುಶಾಹಿ ಅನುಭವ, ಬಹುರೀತಿಯ ಸಂವಾದಗಳು, 2011, ಪುಟ. 105
2. ಗಿರಡ್ಡಿ ಗೋವಿಂದರಾಜ (ಸಂ), ಮಿರ್ಜಿ ಅಣ್ಣಾರಾಯರ ಸಾಹಿತ್ಯ, 2002, ಪುಟ. 14.